ಓ ಎಸ್ ನಂಬರ 175/2016
ಪಿ ಡಬ್ಲ್ಯೂ 3

**ದಿನಾಂಕ: 19.10.2024.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

1. ನಾನು ಕಳೆದ 27 ವರ್ಷಗಳಿಂದ ಬಾಂಡ್ ರೈಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ಮೃತ ವಾದಿ ನನಗೆ ಸುಮಾರು 40 ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ಮತ್ತು ಅವರ ನಡುವೆ ಒಳ್ಳೆಯ ಸಂಬಂಧ ಇರುತ್ತದೆ ಎಂದರೆ ಸರಿ. ನೀವು ಪ್ರತಿವಾದಿಯನ್ನು ಇಲ್ಲಿಯವರೆಗೂ ನೋಡಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯನ್ನು ನೋಡಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಶ್ರೀ ವಿ ಎಸ್ ಕಟ್ಟಿ ಹಾಗೂ ಶ್ರೀ ವಿರೇಶ ಜಿ ಹಲಕಿ ರವರು ಬಾಂಡ್ ರೈಟರ ಆಗಿರುತ್ತಾರೆ. ಸದರಿಯವರು ನಿಶಾನೆ ಪಿ 1 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ ಎಂದರೆ ಸರಿ. ಸದರಿಯವರು ನಿಶಾನೆ ಪಿ 1 ರ ವ್ಯವಹಾರಕ್ಕೆ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹಿರಿಯತನ ಮಾಡಿರುವವರು ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಗುರುತಿಗಾಗಿ ಗುರುತುಬಲ್ಲರು ಸಹಿ ಮಾಡುತ್ತಾರೆ ಎನ್ನುತ್ತಾರೆ. ಸದರಿಯವರು ಯಾರ ಪರವಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಲಾಗುವುದಾ ಎಂದರೆ ಸಾಕ್ಷಿ ಯಾರ ಪರವಾಗಿ ಎಂದು ಹೇಳಲಾಗುವುದಿಲ್ಲ, ಇಬ್ಬರೂ ಪರಿಚಯ ಇರುವ ಕಾರಣ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ಶ್ರೀ ವಿ ಎಸ್ ಕಟ್ಟಿ ಹಾಗೂ ಶ್ರೀ ವಿರೇಶ ಜಿ ಹಲಕಿ ರವರಿಗೆ ಪ್ರತಿವಾದಿ ಯಾರು ಎಂದು ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಬಗ್ಗೆ ಶ್ರೀ ವಿ ಎಸ್ ಕಟ್ಟಿ ಹಾಗೂ ಶ್ರೀ ವಿರೇಶ ಜಿ ಹಲಕಿ ರವರಿಗೆ ಗುರುತು ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಶಾನೆ ಪಿ 1 ರ ವ್ಯವಹಾರ ನಿಮ್ಮ ಸಮಕ್ಷಮ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ವ್ಯವಹಾರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ರವರು ಸಂಚಕಾರ ಎಂದು ರೂ 75000/-ಗಳನ್ನು ನಿಮ್ಮ ಸಮಕ್ಷಮ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವು ಸಹ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

2. ಯಾರು ಪತ್ರವನ್ನು ಬರೆದುಕೊಡುತ್ತಾರೋ ಅವರು stamp paper ಖರೀದಿ ಮಾಡಬೇಕಾಗುತ್ತದೆ ಎಂದರೆ ಸರಿ. ನೀವು ಎಷ್ಟು ಬೆಲೆಯ stamp paper ಖರೀದಿ ಕರಾರು ಪತ್ರ ಆಗಿರುತ್ತದೆ ಎಂದರೆ ಸಾಕ್ಷಿ ರೂ 500/- ಮುದ್ರಾಂಕ ಶುಲ್ಕಗಳದ್ದು ಎನ್ನುತ್ತಾರೆ. 2014 ರಲ್ಲಿ ರೂ 500/- ಮುದ್ರಾಂಕ ಶುಲ್ಕದ stamp paper ಬೇಕಾಗಿತ್ತು. 2014 ರಲ್ಲಿ ರೂ 500/- ಮುದ್ರಾಂಕ ಶುಲ್ಕ stamp paper ಬೇಕಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಶಾನೆ ಪಿ 1 ದಸ್ತಾವೇಜು ನಿಮ್ಮ

ಬಳಿ ಸುಲಭವಾಗಿ ಸಿಗುತ್ತದೆ ಎಂದರೆ ಸರಿ. ನಿಶಾನೆ ಪಿ 1 ನ್ನು ತಯಾರಿಸುವ ಪೂರ್ವದಲ್ಲಿ ಉತಾರನ್ನು ನೋಡಿರುತ್ತೇನೆ. ನೀವು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಉತಾರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಉತಾರ ನೋಡಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ದಸ್ತಾವೇಜು ಬರೆಯುವ ಪೂರ್ವದಲ್ಲಿ ನೀವು ಒಂದು ಕಚ್ಚಾ ಮಾಹಿತಿಯನ್ನು ಬರೆದುಕೊಳ್ಳುತ್ತೀರಿ ಎಂದರೆ ಸರಿ. ಸದರಿ ಕಚ್ಚಾ ಮಾಹಿತಿಯನ್ನು ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಮೃತ ವಾದಿ ಕೀರ್ತಿ ಫೈನಾನ್ಸ ಬೈಲಹೊಂಗಲನ ಪಾಲುದಾರರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಷಯ ನಿಮಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ನಿಶಾನೆ ಪಿ 1 ನ್ನು ಮೃತ ವಾದಿ ಹಾಗೂ ಅವನ ಹಿತೈಶಿಗಳು ಬೇರೆ ಕಡೆ ತಯಾರು ಮಾಡಿಕೊಂಡು ಬಾಂಡ್ ರೈಟರ ನೀವಾದ ಕಾರಣ ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ನಿಮ್ಮ ಗಣಕಯಂತ್ರದಲ್ಲಿ ತಯಾರು ಆಗಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 1 ಈಗ ನಿಮ್ಮ ಗಣಕಯಂತ್ರದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ದಾಖಲೆ 2014 ರದ್ದಾಗಿದ್ದು, ಈಗ ಇರುವುದಿಲ್ಲ ಎನ್ನುತ್ತಾರೆ. ನಿಶಾನೆ ಪಿ 1 ನಿಮ್ಮ ಗಣಕಯಂತ್ರದಲ್ಲಿ ತಯಾರಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಮಗೆ ನಿಶಾನೆ ಪಿ 1 ನ್ನು ತಯಾರಿಸಲು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನಿಶಾನೆ ಪಿ 1 ನ್ನು ತಯಾರಿಸಲು ಮಾಹಿತಿ ನೀಡಿದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಆದ ಹಣದ ವ್ಯವಹಾರ ಸಂಬಂಧ ನಿಶಾನೆ ಪಿ 1 ತೋರಿಕೆ ಪತ್ರ ಬೇರೆ ಕಡೆ ತಯಾರಾಗಿರುತ್ತದೆ, ನೀವು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸಹಿ ಮತ್ತು ಸೀಲ್ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಈ ದಾವೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ವಾದಿ ಈರಪ್ಪ ಹಾಗೂ ನಿಮಗೆ ಒಳ್ಳೆಯ ಭಾಂದವ್ಯ ಇರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಂದೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

sd/-

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ